# MODEL EXAMINATION FEBRUARY - 2012

## PART II – KANNADA

*HSE I (Score : 80, Time : 2 Hrs. 45mts)*

**1.** ಕೆಳಗಿನ ತಖ್ತೆಯಲ್ಲಿ ಕವಿ, ಕಾವ್ಯ ಹಾಗೂ ಕಾವ್ಯದ ಭಾಗಗಳನ್ನು ತಪ್ಪಾಗಿ ಕೊಡಲಾಗಿದೆ. ಅವುಗಳನ್ನು ಹೊಂದಿಕೆಯಾಗುವಂತೆ ಬರೆಯಿರಿ. **(4)**

| | | |
|---|---|---|
| ಬೇಂದ್ರೆ | ಅವ್ವ | ಸರ್ವರಿಗೆ ಸಮಬಾಳು!<br>ಸರ್ವರಿಗೆ ಸಮಪಾಲು! |
| ಕುವೆಂಪು | ಕೋಳೂರ ಕೊಡಗೂಸು | ಕಾಯುತ್ತಲಿದೆ ಕಲ್ಕಿ ಉದಯ |
| ಹರಿಹರ | ಹೊಸ ಬಾಳಿನ ಗೀತೆ | ಫಲವತ್ತಾದ ಕಪ್ಪು ನೆಲ |
| ಲಂಕೇಶ್ | ಬುದ್ಧ | ಹಾಲನಾರೋಗಿಸಿದನಿಳೆ<br>ಕೌತುಂಕಂಬಡಲು |

**2.** ದೇವನೂರು ಮಹಾದೇವ ಅವರ 'ಡಾಂಬರು ಬಂದುದು' ಎಂಬ ಕಥೆಯ ಭಾಗವನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿರಿ. **(4)**

*ಪಟೇಲರು : ನಾ ಯಾನ ನನ್ನ ಇರೊ ಮಕ್ಕಳ್ಗಾಗಿ ಹಣ ತಿಂದ್ಯೊ. ಊರ್ಗಾಗಿ ದೇವ್ರ ಕೆಲ್ಸಕ್ಕಾಗಿ ಹಂಗ ಮಾಡ್ದನೊ?*
*ಮಾದು : ನೀವು ಯಾಕಾರು ಮಾಡಿ ಸ್ವಾಮಿ. ಆದ್ರ ಮಾಡೊ ಅಂತದ್ಕ ಮಾಡ್ಬಿಲ್ಲ.*
*ಒಬ್ಬ : ನಿಮ್ಗ ದೇವ್ರು ದಿಂಡ್ರು ಹಿರೀಕರು ಅಂತ ಒಬ್ರೂ ಇಲ್ವ?*
*ಇನ್ನೊಬ್ಬ: ಇದ್ರ ಈ ಯಾಪಾರ ಮಾಡ್ತಾ ಇದ್ವ ಅವು?*

**3.** ಕೆಳಗೆ ಕೊಟ್ಟಿರುವ ಆಂಗ್ಲ ಭಾಷೆಯ ಗದ್ಯಭಾಗವನ್ನು ಓದಿ ಅದರ ಆಶಯವನ್ನು ಕನ್ನಡದಲ್ಲಿ ಬರೆಯಿರಿ. **(4)**

**The students were waiting and it happened. The butterfly struggled to get out of cocoon and against the advice of the teacher one of the students took pity on it and decided to help the butterfly out of the cocoon. He broke the cocoon to help the butterfly. So it didn't have to struggle any more. But shortly afterwards the butterfly died.**
**(struggle ಕಷ್ಟಪಡು, cocoon = ರೇಷ್ಮೆ ಗೂಡು)**

**4.** 'ಅಧಿಕಾರ ಮತ್ತು ಐಶ್ವರ್ಯಗಳು ಮಾನವೀಯ ಸಂಬಂಧಗಳನ್ನು ಛಿದ್ರಗೊಳಿಸುತ್ತವೆ' ಎಂಬ ಮಾತು ಬಾಹುಬಲಿಯ ಬದುಕಿಗೆ ಹೊಂದಿಕೆಯಾಗುತ್ತದೆಯೇ? ಕಿರು ಲೇಖನವೊಂದನ್ನು ತಯಾರಿಸಿರಿ. **(5)**

**5.** ಕೆಳಗೆ ನೀಡಲಾದ ಕಾವ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸು ಗುರುತಿಸಿರಿ. **(5)**

*ಬಾಹುಬಲಿ ತನ್ನ ದಕ್ಷಿಣ*
*ಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್*

**6.** ದೇವರು ಒಲಿಯಬೇಕಾದರೆ ದೃಢವಾದ ಭಕ್ತಿ ಅಗತ್ಯ. ಭಕ್ತಿ ಇಲ್ಲದ ಪೂಜೆ ವ್ಯರ್ಥ ಎಂಬ ದೃಢವಾದ ನಂಬಿಕೆ ಬಸವಣ್ಣನವರದ್ದು. ಇದನ್ನು ಅವರು ಹೇಗೆ ನಿರೂಪಿಸಿದ್ದಾರೆ. **(5)**

**7.** 'ಕಾಲಜ್ಞಾನಿ ಕನಕ' ನಾಟಕದಲ್ಲಿ ಬಂದಿರುವ 'ಬಾಳೆಹಣ್ಣಿನ ಪ್ರಸಂಗ'ದ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **(6)**

**8.** ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗಬಹುದಾದ ದುಷ್ಪರಿಣಾಮವನ್ನು ನೀವು ತಿಳಿದಿರುವಿರಿ. ನಿಮ್ಮ ಪಂಚಾಯತಿನಲ್ಲಿ ಪ್ಲಾಸ್ಟಿಕನ್ನು ನಿರೋಧಿಸುವಂತೆ ಆಗ್ರಹಿಸಿ ಎರಡು ಘೋಷಣಾ ವಾಕ್ಯಗಳನ್ನು ತಯಾರಿಸಿರಿ. **(2)**

**9.** ನಮ್ಮ ನಾಡಿನಲ್ಲಿ ಇತ್ತೀಚೆಗಿನ ಕಾಲಗಳಲ್ಲಿ ಮಲೇರಿಯಾ, ಚಿಕೂನ್ ಗುನ್ಯಾ, ಡೆಂಗ್ಯು, ಇಲಿ ಜ್ವರ ಮೊದಲಾದ ರೋಗಗಳು ಹೆಚ್ಚಾಗಿ ಕಂಡು ಬರುತ್ತಿವೆ. ಈ ರೋಗಗಳನ್ನು ನಿಯಂತ್ರಿಸುವುದು ನಮ್ಮೆಲ್ಲರ ಜವಾಬ್ದಾರಿ. ಈ ಕುರಿತು ಜನರನ್ನು ಜಾಗೃತಗೊಳಿಸುವ ಕರಪತ್ರವೊಂದನ್ನು ತಯಾರಿಸಿರಿ. **(6)**

**10.** ಚಿತ್ರವೊಂದನ್ನು ಕೆಳಗೆ ಕೊಡಲಾಗಿದೆ. ಇದನ್ನು ನೋಡಿ ಅಲ್ಲಿ ನಡೆದಿರಬಹುದಾದ ಸಂಭಾಷಣೆಯನ್ನು ಬರೆಯಿರಿ. ಶೀರ್ಷಿಕೆ ಇರಲಿ. **(5)**



**11.** ಭಾರತೀಯ ಸಂದರ್ಭದಲ್ಲಿ ಜಾತಿ, ಮತ, ಧರ್ಮ ಮತ್ತು ವರ್ಣ – ವರ್ಗಗಳು ಹುಟ್ಟಿನೊಂದಿಗೆ ಅಂಟಿಕೊಂಡು ವ್ಯಕ್ತಿಗೆ ಬಿಡಿಸಲಾಗದ ಕವಚದ ಬಂಧನವನ್ನು ಉಂಟುಮಾಡುತ್ತವೆ. ಈ ಮಾತಿನ ಆಧಾರದಲ್ಲಿ 'ಕವಚ' ಕವನದ ಆಶಯವನ್ನು ಬರೆಯಿರಿ. **(5)**

**12.** ನಿಮ್ಮ ಶಾಲೆಯ ಎನ್. ಎಸ್. ಎಸ್. (NSS) ಆಶ್ರಯದಲ್ಲಿ ರಕ್ತದಾನ ಶಿಬಿರವೊಂದು ನಡೆಯಿತು. ಶಿಬಿರದ ಉದ್ಘಾಟನೆಯನ್ನು ಕಾಸರಗೋಡು ಶಾಸಕ ಎನ್. ಎ. ನೆಲ್ಲಿಕುನ್ನು ಅವರು ನೆರವೇರಿಸಿದರು. ಪಂಚಾಯತು ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಿದ್ದ ಕಾರ್ಯಕ್ರಮದ ಸ್ವರೂಪವನ್ನು ಕಲ್ಪಿಸಿಕೊಂಡು ಪತ್ರಿಕಾ ವರದಿಯನ್ನು ತಯಾರಿಸಿರಿ. **(6)**

**13.** ಮಗುವಿನ ವರ್ಣನೆಯಿರುವ ಕವನಭಾಗವೊಂದನ್ನು ಕೆಳಗೆ ನೀಡಲಾಗಿದೆ. ಆಸ್ವಾದನಾ ಟಿಪ್ಪಣೆ ಬರೆಯಿರಿ. **(5)**

ಅದೊ ಬಂದ ಇವನೊಂದು ಕಿರಿಯ ಬಿರುಗಾಳಿ!
ಮನೆಯ ಒಳಗೂ ಹೊರಗೂ ಇವನದೆ ಧಾಳಿ!
ಇದ್ದುದೊಂದೆಡೆ ಇರದು ಇವನ ರಾಜ್ಯದಲಿ
ತುಂಟತನಕಿನ್ನೆರಡು ಕಾಲ್ ಬಂದ ತೆರದಿ
ಬಂದುದಿವನಿಗೆ ಎರಡು ಪುಟ್ಟಕಾಲು!
ಮನೆಯ ವಸ್ತುಗಳೆಲ್ಲ ದಿಕ್ಕುಪಾಲು!
ತುಂಬು ಕಿತ್ತಳೆ ಕೆನ್ನೆ ನಗೆ ಮಿಂಚುಗಳ ಕುವರ
ಕ್ರಾಂತಿಕಾರ!

– ಜಿ. ಎಸ್. ಶಿವರುದ್ರಪ್ಪ **(6)**

**14.** ನಿಮ್ಮೂರಿನಲ್ಲಿ ಜಾನಪದ ಪಾಡ್ದನಗಳನ್ನು ಹಾಡಬಲ್ಲ ಹಿರಿಯ ಕಲಾವಿದರಿದ್ದಾರೆ ಎಂದು ಭಾವಿಸಿಕೊಳ್ಳಿರಿ. ಅವರ ಸಂದರ್ಶನ ಮಾಡಬೇಕಾಗಿದೆ. ಸಂದರ್ಶನಕ್ಕಾಗಿ ಆರು ಪ್ರಶ್ನೆಗಳನ್ನು ತಯಾರಿಸಿರಿ. **(6)**

**15.** ನೀವು ಇತ್ತೀಚೆಗೆ ಶಾಲೆಯಿಂದ ಕೈಗೊಂಡ ಪ್ರವಾಸದ ಕುರಿತು ಪ್ರವಾಸ ಕಥನವನ್ನು ಸಿದ್ಧಗೋಳಿಸುವಂತೆ ಅಧ್ಯಾಪಕರು ನಿಮ್ಮಲ್ಲಿ ಸೂಚಿಸಿದ್ದಾರೆ. ಅದಕ್ಕಾಗಿ ಪ್ರವಾಸಕಥನವೊಂದನ್ನು ಸಿದ್ಧಪಡಿಸಿರಿ. **(6)**